1

ಮನೆಯಿಂದ ನಾನು ಕೆಲಸ ಮಾಡುವ ಕನ್ನಡ ವಿಶ್ವವಿದ್ಯಾಲಯಕ್ಕೆ ಎಂಟು ಮೈಲಿ ಫಾಸಲೆ. ಇದನ್ನು 'ಹಂಪಿರೋಡ್' ಎಂಬ ಅಂಕುಡೊಂಕಿನ ರಸ್ತೆಯಲ್ಲಿ ಕ್ರಮಿಸಬೇಕು. ಅನಂತಶಯನಗುಡಿ, ಕೊಂಡನಾಯಕನಹಳ್ಳಿ, ಮಲಪನಗುಡಿ, ಗಾಳೆಮ್ಮನಗುಡಿ ಮುಂತಾದ ಹಳೆಗಾಲದ ಊರುಗಳ ಮೂಲಕ ಹಾಯಬೇಕು. ಕಾಲು ಶತಮಾನ ಕಾಲ ಬಸ್ಸು, ಸ್ಕೂಟರುಗಳಲ್ಲಿ ಹಾದೆ. ವಯಸ್ಸಾಗಿದ್ದರಿಂದಲೊ ರೊಕ್ಕದ ಸೊಕ್ಕಿನಿಂದಲೊ ಈಚೆಗೆ ಒಂದು ಪುಟ್ಟ ಕಾರನ್ನು ಕೊಂಡುಕೊಂಡೆ. ನಿಜ ಹೇಳಬೇಕೆಂದರೆ, ನನಗೆ ಕಾರು ಕೊಂಚವೂ ಇಷ್ಟವಿರಲಿಲ್ಲ. ಎಲ್ಲಿ ಬೇಕೆಂದರಲ್ಲಿ ನುಸುಳುವ, ಹಾಳುಗೋಡೆಯ ಕತ್ತೆಯಂತೆ ಸಿಕ್ಕ ಜಾಗದಲ್ಲಿ ನಿಲ್ಲುವ, ಕಡಿಮೆ ಖರ್ಚಿನ ಸ್ಕೂಟರೇ ಪ್ರಿಯ. ಅದರ ಸೀಟಿಗೆ ಹತ್ತಿಕೊಂಡು ನಾನು ಹುಟ್ಟಿದೆನೊ ನನಗೆ ಹತ್ತಿಕೊಂಡು ಅದು ಹುಟ್ಟಿತೊ ಎಂಬಂತೆ ನಮ್ಮಿಬ್ಬರ ಸ್ನೇಹವಿತ್ತು. ನಾನು ಅತಿವೇಗದಲ್ಲಿ ನಡೆಸುತ್ತೇನೆಂದೂ ಯಾವುದಾದರೂ ಬಸ್ಸಿನ ಚಕ್ರದಡಿಯಲ್ಲೇ ನನ್ನ ಮರಣಶಾಸನ ಬರೆದಿದೆಯೆಂದೂ ಹಿತಚಿಂತಕರು ಆಪಾದನೆ ಮಾಡುತ್ತಲೇ ಇದ್ದರು. ನಾನಿದನ್ನು ಒಪ್ಪಿರಲಿಲ್ಲ. ನನ್ನ ಸ್ಕೂಟರು ಕೊಂಚ ವೇಗಿಯಿರಬಹುದು; ಕೆಲವೊಮ್ಮೆ ಕೆಡವಿರಲೂಬಹುದು (ಆಗ ನನ್ನ ಹೆಂಡತಿ ಬಾನು ಕೂಡ ಜತೆಗಿದ್ದಳು ಎಂಬುದು ಸಮಾಧಾನದ ಸಂಗತಿ); ಆದರೆ ಈ ತನಕ ದಾರಿಹೋಕರನ್ನಿರಲಿ ಒಂದು ಇರುವೆಯನ್ನೂ ಸಾಯಿಸಿದ ದಾಖಲೆಯಿಲ್ಲ.

ನನ್ನ ಮತ್ತು ಸ್ಕೂಟರಿನ ಆಪ್ತ ಅನುಬಂಧವನ್ನು ಮುರಿಯುಬೇಕೆಂದು ಹೆಂಡತಿ ಮತ್ತು ಮಕ್ಕಳು ಪಿತೂರಿ ಮಾಡಿದರು. ಇಲ್ಲದ ಒತ್ತಡ ಹೇರಿ, ನನಗಿಲ್ಲದ ಯೋಗ್ಯತೆ ಅರ್ಹತೆಗಳನ್ನು ನನಗೇ ಮನವರಿಕೆ ಮಾಡಿ, ಯಾರ್‍ಯಾರೆಲ್ಲ ಕಾರು ಕೊಂಡಿದ್ದಾರೆ ಎಂದು ತೌಲನಿಕ ಪಟ್ಟಿಕೊಟ್ಟು ಒಪ್ಪಿಸಿಬಿಟ್ಟರು. ಭೋಳೆ ಗೃಹಸ್ಥನಾದ ನಾನು ಸೋವಿಯಲ್ಲಿ ಯಾಮಾರಿದೆ. ಒಮ್ಮೆ ಕಾರನ್ನೇರಿದ ಬಳಿಕ ಅದರ ಬಿಡಿಭಾಗವಾಗಿ ಬದಲಾಗಿ ಹೋದೆ. ಲೋಕದ ಸುಖಗಳಲ್ಲಿ ಡ್ರೈವಿಂಗ್ ಸುಖವೆಂಬುದೂ ಒಂದಿದೆ ಎಂದು ಅರಿವಾಗಲು ಇಷ್ಟು ವರ್ಷ ಬೇಕಾಯಿತು. ಅಷ್ಟಿಲ್ಲದೆ ಪಂಡಿತ ಭೀಮಸೇನ ಜೋಶಿಯವರು ಡ್ರೈವಿಂಗ್ ಹುಚ್ಚನ್ನು ಹತ್ತಿಸಿಕೊಂಡಿರಲಿಲ್ಲ. ಕಾರು ನನ್ನ ಅಲೆಮಾರಿತನಕ್ಕೆ ಚೆನ್ನಾಗಿ ಒದಗುತ್ತ ಹೊಸ ಸಂಗಾತಿಯಾಯಿತು. ಇಲ್ಲೀತನಕ ನನ್ನ ದುಃಸ್ಥಿತಿಯಲ್ಲೆಲ್ಲ ಬೆನ್ನಿಗೆ ನಿಂತಿದ್ದ ಪಾಪದ ಸ್ಕೂಟರು, ತಲಾಕು ಪಡೆದು ಅಜ್ಞಾತವಾಸಕ್ಕೆ ಸಂದಿತು.

ಮಾಂತ್ರಿಕನಿಗೆ ಕೈವಶವಾದ ಭೂತದಂತೆ ಕಾರು ನನ್ನ ಇಚ್ಛೆಯಂತೆ ವರ್ತಿಸುತ್ತದೆ ಎಂಬ ನಂಬಿಕೆ ನನ್ನದಾಗಿತ್ತು. ಈ ನಂಬಿಕೆ ಬಹುಬೇಗನೆ ಛಿದ್ರಗೊಂಡಿತು. ಅದು ನನ್ನ ಮನಸ್ಸಿಗೆ ವಿರುದ್ಧವಾಗಿ ತನ್ನದೇ ಹಾದಿ ಆರಿಸಿಕೊಳ್ಳತೊಡಗಿತು. ಹಂಪಿರೋಡನ್ನು ಒಲ್ಲೆ ಎನ್ನತೊಡಗಿತು. ನುಣುಪಾದ ಅಗಲವಾದ ಬಳ್ಳಾರಿ ಹೈವೇಯತ್ತ ಎಳೆಯತೊಡಗಿತು. ಗಣಿಧಣಿಗಳ ಗಾಳಿ ಇದಕ್ಕೂ ಬೀಸಿತೊ ಹೇಗೆ? ಹಾಗೆ ಕಂಡರೆ, ಹೈವೇ ಮೂಲಕ ಕಚೇರಿಗೆ ಹೋದರೆ ಎರಡು ಮೈಲಿ ಹೆಚ್ಚು. ಆದರೆ ರೈಲ್ವೆಕ್ರಾಸಿಂಗ್, ಜನ–ದನ, ಹಂಪು ಇತ್ಯಾದಿ ಅಡೆತಡೆ ಕಡಿಮೆ.

ಕೆಲವೇ ತಿಂಗಳಲ್ಲಿ ಹೈವೇ ಪಯಣ ಉಪ್ಪು ಖಾರವಿಲ್ಲದೆ ಸಪ್ಪೆಯೆನಿಸಿತು. ಏನನ್ನೊ ಕಳೆದುಕೊಂಡ ಕೊರಗು ಕಾಡತೊಡಗಿತು. ಏಕಾಂತದಲ್ಲಿ ವಿಚಾರ ಮಾಡಲಾಗಿ, ಹಂಪಿ ಹಾದಿಯಲ್ಲಿ ಸಿಗುತ್ತಿದ್ದ ವರ್ಣರಂಜಿತವಾದ ನೋಟ, ಸಪ್ಪಳ, ವಾಸನೆ ರುಚಿಗಳು ಇಲ್ಲಿ ಗೈರು ಹಾಜರಿಯಾಗಿವೆ ಎಂದು ಹೊಳೆಯಿತು. ಇಷ್ಟಾದರೂ ನಾನು ಹಂಪಿರೋಡಿಗೆ ಮರಳಲಾರೆ. ಆದರೆ ಅದರ ನೆನಪುಗಳಿಂದ ಬಿಡುಗಡೆಯನ್ನೂ ಪಡೆಯಲಾರೆ. ಬಹುಶಃ ನಾಲ್ಕು ಮಂದಿಯಲ್ಲಿ ಹಂಚಿಕೊಂಡೇ ಅವುಗಳ ಹೊರೆ ಇಳಿಸಿಕೊಳ್ಳಬೇಕು.